Developments in Bangalore City Corporation.

550 SRI P. RAMDEV (Malleswaram).—Will the Minister for Housing and Urban Development be pleased to state.—

(a) whether it has come to the notice of Government that during the year 1980-81 the Bangalore City Corporation has not taken up any developmental programmes or works ;

(b) if so, whether the developmental work of the Corporation has not been curtailed ;

(c) the action taken by the Government in this matter ?

SRI DHARAM SINGH NARAYANA SINGH (Minister for Housing and Urban Development).—

(a) No.

(b) Does not arise.

(c) During the year 1980-81 Rs. 6.42 crores have been earmarked for developmental programmes. Out of this a sum of Rs. 4.5 crores has been spent upto end of December 1980. The remaining amount is expected to be spent before the end of this year for implementing the various works.

ಶ್ರೀ ಪಿ. ರಾಮದೇವ್.—ಸ್ವಾಮಿ ೧೯೮೦-೮೧ರಲ್ಲಿ ತಾವು ೬.೪೨ ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಮೀಸಲಾಗಿಟ್ಟು, ಇದರಲ್ಲಿ ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆಂದು ಹೇಳಿರುತ್ತೀರಿ. ಯಾವ ಯಾವುದಕ್ಕೆ ಖರ್ಚುಮಾಡಿರುತ್ತೀರಿ ಅದರ ವಿವರಗಳನ್ನು ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—೧೯೮೦-೮೧ರಲ್ಲಿ ೪೬೮ ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಪ್ರೊವೈಡ್ ಮಾಡಿದ್ದೇವೆ. ಇದರಲ್ಲಿ ೪೫೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುತ್ತೇವೆ. ೩೧-೧೨-೧೯೮೦ರ ಒಳಗಾಗಿ ೨೫೦೦ ಎಸ್ಟಿಮೇಟ್ಸ್‌ಗಳಿಗೆ ೧೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕೆಲಸಗಳು ನಡೆಯುತ್ತಿವೆ. ತಾವು ಕೇಳುತ್ತಿರುವುದು ರೋಡ್ಸ್ ವರ್ಕ್ಸ್‌ಗಾಗಿ ಮತ್ತಿತರ ಅಭಿವೃದ್ಧಿ ಕಾರ್ಯಗಳಿಗಾಗಿ ಎಷ್ಟು ಹಣವನ್ನು ಖರ್ಚುಮಾಡಿರುತ್ತೀರಿ ಎಂದು ಅದರ ವಿವರಗಳನ್ನು ಕೊಡಬೇಕೆಂದರೆ ಇದರಲ್ಲಿ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಎಂದರೆ ಜಯನಗರ ಹಾಸ್ಪಿಟಲ್ ಮತ್ತು ಇತರ ಹಾಸ್ಟೆಟಲ್‌ಗಳಿಗೆ ಮತ್ತು ಇತರೆ ಕೆಲಸಗಳಿಗೆ ಖರ್ಚು ಮಾಡಿದ್ದೇವೆ. ಮತ್ತು ೧೫೦ ಲಕ್ಷ ರೂ.ಗಳನ್ನು ರಸ್ತೆಗಳು ಮತ್ತು ಇತರ ಕೆಲಸಗಳಿಗೆ ಖರ್ಚು ಮಾಡಲಾಗಿದೆ.

ಶ್ರೀ ಪಿ. ರಾಮದೇವ್.—ಬಹುಶಃ ತಮ್ಮ ಅಧಿಕಾರಿಗಳು ತಮಗೆ ಸರಿಯಾದ ಮಾಹಿತಿ ಕೊಟ್ಟಿಲ್ಲ ವೆಂದು ಕಾಣುತ್ತದೆ. ತಾವು ೪ ೫ ಕೋಟಿ ರೂಪಾಯಿ ಏನು ಖರ್ಚು ಮಾಡಿದ್ದೀರಿ ಇದರಲ್ಲಿ ಸ್ಟೀಲ್ ಓವರ್ ವರ್ಕ್ಸ್‌ಗೆ ಎಂದರೆ ಕಳೆದ ವರ್ಷ ಮಾಡಬೇಕಾದ್ದಕ್ಕೆ ೨.೨೧ ಕೋಟಿ ರೂ. ಖರ್ಚು ಮಾಡಲಾಗಿದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ತಾವು ಈ ವರ್ಷ ಖರ್ಚು ಮಾಡಿರತಕ್ಕದ್ದು ಕೇವಲ ೨ ಕೋಟಿ ರೂಪಾಯಿಗಳು ಎಂದು ಒಪ್ಪಿಕೊಂಡಂತಾಯಿತು, ಇದರಲ್ಲಿ ಕಳೆದ ವರ್ಷ ೧೯೭೯-೮೦ರಲ್ಲಿ ಬೆಂಗಳೂರು ನಗರ ಸಭೆಯಲ್ಲಿ ಕಾಮಗಾರಿಗಳ ಬಗ್ಗೆ ಎಷ್ಟು ಖರ್ಚು ಮಾಡಿದ್ದೀರಿ ?

ಶ್ರೀ ಧರ್ಮಸಿಂಗ್.—೧೯೭೯-೮೦ರಲ್ಲಿ ೫೩೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಪಿ. ರಾಮದೇವ್,—ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡುತ್ತಿಲ್ಲ. They have spent Rs. 7.19 crores These are the revised estimates for the year 1979-80. They have also mentioned the actuals. ತಮ್ಮ ಕಾರ್ಪೊ

ರೇಷನ್ನಿನಲ್ಲಿ ಬಜೆಟ್ ಎಸ್ಟಾಬ್ಲಿಷ್‌ಮೆಂಟ್ ಎಷ್ಟು ? ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಎಷ್ಟು ಪ್ರಪೋರ್ಷನಲ್ಲಿ ರೇಶಿಯೋ ಇಟ್ಟಿದ್ದೀರಿ ಸ್ವಾಮಿ ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ೧೯೮೦-೮೧ರಲ್ಲಿ ಡೆವಲಪ್‌ಮೆಂಟಲ್ ವರ್ಕ್ಸ್‌ಗೆ ಹಾಗೂ ಇತರ ವರ್ಕ್ಸ್‌ಗೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳುತ್ತಿದ್ದಾರೆ. ನಾವು ೧೯೮೦-೮೧ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳಿಗೆ ಮಾಸಲಿಟ್ಟ ೬೪೨ ಲಕ್ಷ ದಲ್ಲಿ ಇದುವರೆವಿಗೂ ೪೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನು ೧೯೭೯-೮೧ರ ಎಸ್ಟಾಬ್ಲಿಷ್‌ಮೆಂಟ್ ವರ್ಕ್ಸ್‌ಗೆ...

SRI P. RAMDEV.—Sir, on a point of order.

MR SPEAKER.—There is no point of order.

SRI P. RAMDEV.—Sir here is an abstract statement of revised Estimates. The grants provided in the year 1980-81 were Rs. 6 42 crores and the anticipated expenditure from 1-12-81 to 31-3-81 was Rs. 4.47 crores,

ಶ್ರೀ ಐ. ಪಿ. ಡಿ. ಸಾಲಪ್ಪ.—ಇದು ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ವಿಷಯ.

ಶ್ರೀ ಪಿ. ರಾಮದೇವ್.—ನನ್ನ ಪಾಯಿಂಟ್ ಏನೆಂದರೆ, ಪ್ರತಿ ವರ್ಷವೂ ಸುಮಾರು ೮ ಕೋಟಿ ಯಷ್ಟು ಹಣವನ್ನು ಕಾರ್ಪೊರೇಷನ್‌ನಲ್ಲಿ ಖರ್ಚು ಮಾಡಲಾಗುತ್ತಿದೆ. ಈ ವರ್ಷ ಬಜೆಟ್‌ನ ೧೯೮೦-೮೧ ರಲ್ಲಿ ಗ್ರಾಂಟ್ ಪ್ರೊವೈಡ್ ಮಾಡಿರುವುದು ೬.೪೨ ಕೋಟಿ ರೂ.ಗಳು ಎಂದು ಅವರು ಕೊಟ್ಟಿರತಕ್ಕದ್ದು. ಮತ್ತು according to the revised budget which was approved by the Government, they have given Rs. 8.13 crores. The anticipated expenditure from 1-12-80 to 13-3-81 is Rs. 4.47 crores but the Corporation has not spent more than Rs. 2 crores.

ತಾವು ಕೊಟ್ಟಿರುವ ಅಂಕಿ ಅಂಶ ಇಲ್ಲಿದೆ. ಇದನ್ನು ತಾವು ಅಪ್ರೂವ್ ಮಾಡುತ್ತೀರಾ ? ಇದನ್ನು ಅವರು ಮೆಚ್ಚುತ್ತಾರೆಯೇ ? ಇದನ್ನು ಅಪ್ರೂವ್ ಮಾಡಿದ್ದಾರೆಯೇ ? ನಾವೂ ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ. ಎರಡು ಮೀಟಿಂಗ್ಸ್ ಆಗಿದೆ.

ಶ್ರೀ ಧರ್ಮಸಿಂಗ್.—ಮಾನ್ಯ ರಾಮದೇವ್ ಅವರ ಪ್ರಶ್ನೆ ಇಷ್ಟೇ. ೧೯೮೦-೮೧ರಲ್ಲಿ ಎಷ್ಟು ಬಂದರೂ ಅದು ಖರ್ಚಾಗುತ್ತಾ ಇಲ್ಲಾ ಎಂದು ಹೇಳುತ್ತಿದ್ದಾರೆ. ನಾನೂ ಕೂಡ ಈ ಬಗ್ಗೆ ಐದಾರು ಬಾರಿ ಬೆಂಗಳೂರು ನಗರದ ಶಾಸಕರ ಒಡಗೂಡಿ ಸಮಾಲೋಚನೆ ಮಾಡಿದ್ದೇನೆ. ಸೆನ್ಸಸ್ ಕೆಲಸ ಇದ್ದುದ್ದರಿಂದ ಎಲ್ಲ ಎಂಜಿನಿಯರ್‌ಗಳು ಹಾಗೂ ಜೂನಿಯರ್ ಎಂಜಿನಿಯರ್‌ಗಳು ಆ ಕಡೆ ಗಮನ ಕೊಡದ ಪ್ರಯುಕ್ತ ಕೆಲಸಗಳನ್ನು ಪ್ರೊಗ್ರೆಸ್ ಮಾಡುವುದಕ್ಕಾಗಲಿಲ್ಲ. ಆದರೂ ಕೂಡಾ ಬಜೆಟ್‌ನಲ್ಲಿ ಇರತಕ್ಕ ಹಣ ಲ್ಯಾಪ್ಸ್ ಆಗುವುದಿಲ್ಲ. ಈಗಾಗಲೇ ಸೆನ್ಸಸ್ ಕೆಲಸ ಮುಗಿದ ನಂತರ ಕೂಡಾ ಕೆಲವು ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ೨೫೦೦ ಎಸ್ಟಿಮೇಟ್ಸ್‌ಗೆ ೧೫೦ ಲಕ್ಷ ರೂ.ಗಳನ್ನು ಖರ್ಚು ಮಾಡಿ ಕೆಲಸ ಮಾಡುತ್ತಾ ಇದ್ದೇವೆ. ನಗರದ ಎಲ್ಲಾ ಶಾಸಕರ ಜೊತೆ ಈ ಬಗ್ಗೆ ಸಮಾಲೋಚನೆ ಮಾಡಿದ್ದೇವೆ. ಶಾಸಕರುಗಳು ೨೦೦ ವರ್ಕ್ಸ್‌ಗಳನ್ನು ತೆಗೆದುಕೊಳ್ಳಬೇಕೆಂದು ಪ್ರಪೋಸಲ್ ಕೊಟ್ಟಿದ್ದಾರೆ. ಈಗಾಗಲೇ ಸೆನ್ಸಸ್ ವರ್ಕ್ಸ್ ಆದ ಒಂದು ತಿಂಗಳೊಳಗೆ ೨೮೬ ಕಾಮಗಾರಿಗಳನ್ನು ಸ್ಯಾಂಕ್ಷನ್ ಮಾಡಿದ್ದಾಗಿದೆ. ಅದಕ್ಕೆ ೪೦೨ ಲಕ್ಷ ರೂ.ಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಈಗಾಗಲೇ ೪೦ ಲಕ್ಷ ರೂ.ಗಳ ಕೆಲಸವನ್ನು ತೆಗೆದುಕೊಂಡಿದ್ದೇವೆ. ಇನ್ನುಳಿದ ೨೪೬ ಕಾಮಗಾರಿಗಳು ವಿವಿಧ ಹಂತದಲ್ಲಿ ಎಂದರೆ, ಆಡಳಿತಾಧಿಕಾರಿ ಹಾಗೂ ಕಮಿಷನರ್ ಮುಂತಾದವರುಗಳಿಂದ ಒಪ್ಪಿಗೆ ಸಿಗಬೇಕಾಗಿದೆ. ಈಗ ಏನು ಹಣ ಉಳಿದಿದೆ ಅದನ್ನೂ ಕೂಡಾ ಖರ್ಚು ಮಾಡತಕ್ಕ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಈ ಮಾರ್ಚ್ ತಿಂಗಳ ಒಳಗೆ ಎಂದರೆ ಇನ್ನು ೫-೬ ದಿನಗಳ ಒಳಗಾಗಿ ಇನ್ನೂ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹಣ ಲ್ಯಾಪ್ಸ್ ಆಗತಕ್ಕ ಪ್ರಮೇಯ ಇಲ್ಲ. ಚುನಾವಣಾ ಕೆಲಸ ಕಾರ್ಯಗಳಿಂದಾಗಿ ಸ್ವಲ್ಪ ತಡವಾಗಿದೆ.

ಶ್ರೀ ಎಂ. ಚಂದ್ರಶೇಖರ್.—೧೯೮೦-೮೧ನೇ ಸಾಲಿಗೆ, ೧೯೬೪ನೇ ಇಸವಿಯಲ್ಲಿ ಸೇರ್ಪಡೆಯಾಗಿರತಕ್ಕ ಹಳ್ಳಿಗಳ ಅಭಿವೃದ್ಧಿಗಾಗಿ ೧ ಕೋಟಿ ೩೮ ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಇತ್ತಿದ್ದು, ಆದರೆ ಇದುವರೆವಿಗೂ ಆ ಬಾಬತ್ತಿನಲ್ಲಿ ಕಾರ್ಪೊರೇಷನ್‌ನವರು ಸರ್ಕಾರದಿಂದ ಹಣವನ್ನು ಪಡೆದಿರುವುದಕ್ಕೆ ಮಾಹಿತಿ ಇದೆಯೇ ?

ಶ್ರೀ ಧರ್ಮಸಿಂಗ್.—೧೯೬೪ರಲ್ಲಿ ಸೇರ್ಪಡೆಯಾದಂತಹ ೩೩ ಹಳ್ಳಿಗಳು ಹಾಗೂ ೨೯ ಹ್ಯಾಮ್ಲೆಟ್ಸ್ ಬಗ್ಗೆ ಕೇಳಿದ್ದಾರೆ. ಸರ್ಕಾರ ಇದಕ್ಕೆ ೧.೩೬ ಕೋಟಿ ರೂ.ಮಂಜೂರು ಮಾಡಿದೆ. ಇದರಲ್ಲಿ ೫೭ ಲಕ್ಷ ರೂಪಾಯಿಗಳಿಗೆ ಅಂದಾಜು ಬಂದಿದೆ. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಈ ಕೆಲಸವನ್ನು ಕೈಗೊಂಡಿದ್ದು ಅದು ಮುಂದುವರೆಯುತ್ತಿದೆ,

ಶ್ರೀ ಎಂ. ಚಂದ್ರಶೇಖರ್.—ಇನ್ನು ಮಿಕ್ಕ ಹಣವನ್ನು ಬೇರೆ ಕೆಲಸಗಳಿಗಾಗಿ ಕೊಟ್ಟಂತ ಹದ್ದಾಗಿದೆ. ಬೇರೆ ಕೆಲಸಗಳು ಎಂದರೆ ಈ ಒಂದು ಸೇರಲ್ಪಟ್ಟ ಹಳ್ಳಿಗಳಿಗೆ ಸಂಬಂಧಪಟ್ಟಂತೆ ಮಾತ್ರ ರಸ್ತೆಗಳು, ಒಳಚರಂಡಿ ವ್ಯವಸ್ಥೆ ಚಿಪ್‌ಕಾರ್ಪೆಟಿಂಗ್ ಕೆಲಸಗಳು ಅನೇಕ ಏನಿವೆ ಅವಕ್ಕೆ ಈ ೧೩೬ ಲಕ್ಷದಲ್ಲಿ ೫೭ ಲಕ್ಷ ಹೋದರೆ ಬಾಕಿ ಹಣ ಏನಿದೆ ಅದನ್ನು ಕೂಡಲೇ ಒದಗಿಸಿ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್. – ನನಗೆ ತಿಳಿದ ಪ್ರಕಾರ ಹೇಗೆ ಎಸ್ಟಿಮೇಟ್ ಬರುತ್ತದೆ ಹಾಗೆ ಕಾರ್ಪೊರೇಷನ್‌ನಲ್ಲಿ ಹಣವನ್ನು ಒದಗಿಸಬೇಕಾಗುತ್ತದೆ. ಅದರಲ್ಲೇನೂ ತಾಪತ್ರಯ ಇಲ್ಲ.

ಶ್ರೀ ಐ. ಪಿ. ಡಿ. ಸಾಲಪ್ಪ.—ಪ್ರತಿ ವರ್ಷ ಒದಗಿಸುವ ಹಣವನ್ನು ಕಾರ್ಪೊರೇಷನ್ನಿನವರು ಆಯಾಯ ವರ್ಷದ ಕೆಲಸ ಮಾಡದೇ ಆ ಕೆಲಸಗಳನ್ನು ಮುಂದುವರಿಸುತ್ತಾರೆ. ಬಜೆಟ್‌ನಲ್ಲಿ ಇಟ್ಟಿರುವ ಹಣ ಲ್ಯಾಪ್ಸ್ ಆಗುವುದಿಲ್ಲವೆಂದು ಹೇಳಿದ್ದಾರೆ. ಸ್ಪಿಲ್ ಓವರ್ ವರ್ಕ್ಸ್ ಎಂದು ಮಾಡಿಬಿಟ್ಟು ಮುಂದಿನ ವರ್ಷದ ಹಣವನ್ನು ಅದಕ್ಕೆ ಖರ್ಚು ಮಾಡಿ ಈ ವರ್ಷದ ಹಣವನ್ನು ಏನು ಮಾಡುತ್ತಾರೋ ನನಗೆ ಅರ್ಥವಾಗುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಕಛೇರಿಗೆ ಹೋಗಿ ವಿಚಾರಿಸಿ ಮಾಡಲಿ. ಪ್ರತಿವರ್ಷವೂ ಆಯಾ ವರ್ಷದ ಕೆಲಸವನ್ನು ಮಾಡದೇ ಮುಂದಿನ ವರ್ಷಕ್ಕೆ ಹಾಕುವುದಕ್ಕೆ ಏನು ಸ್ಪಾಫ್ ಇಲ್ಲವೇ ? ಹಣ ಇಲ್ಲವೇ ? ಇಲ್ಲ ಮಾಡತಕ್ಕ ಮೆಷನರಿ ಇಲ್ಲವೇ ? ಇಲ್ಲ ಮಾಡುವುದಕ್ಕೆ ಮನಸ್ಸು ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಧರ್ಮಸಿಂಗ್.—ಮಾನ್ಯ ಸಾಲಪ್ಪನವರು ಅವರ ಅನುಭವದಿಂದ ಹೇಳುತ್ತಿದ್ದಾರೆ. ಈ ವರ್ಷ ಏನು ಸ್ಪಿಲ್ ಓವರ್ ವರ್ಕ್ಸ್ ಇದೆ ಅದನ್ನೆಲ್ಲಾ ಕಂಪ್ಲೀಟ್ ಮಾಡಬೇಕಾಗುತ್ತದೆ. ಹೊಸದಾಗಿ ಏನೇನು ಶಾಸಕರಿಂದ ಹಾಗೂ ಸಾರ್ವಜನಿಕರಿಂದ ಬೇಡಿಕೆಗಳು ಬಂದಿವೆ, ಆ ಕೆಲಸಗಳೆಲ್ಲಾ ಆಗಬೇಕಾಗಿವೆ. ಆ ಕೆಲಸಗಳಿಗೆ ಎಷ್ಟು ಹಣವನ್ನು ಒದಗಿಸುತ್ತೇವೆ ಅವನ್ನೂ ಖರ್ಚು ಮಾಡುತ್ತೇವೆ. ಮತ್ತು ೧೯೮೦-೮೧ರಲ್ಲಿ ಏನು ೫೪೨ ಲಕ್ಷ ರೂಪಾಯಿಯನ್ನು ಪ್ರೊವೈಡ್ ಮಾಡಿದ್ದೇವೆ ಅದನ್ನು ಕೂಡಾ ಖರ್ಚು ಮಾಡುತ್ತೇವೆ.

Sanction of Nutrition Food Programme in SC/ST areas.

630 SRI L.T. THIMMAPPA HEGDE (Sagar).—Will the Minister for Social Welfare and Backward Classes be pleased to state,—

(a) the number of areas accorded sanction under Nutrition Food Programme in urban areas and Scheduled Tribe development areas ;

(b) the number of persons benefited by this scheme. The details of urban and scheduled Tribe areas to which the scheme has been sanctioned but the programme has not been commenced(particulars to be furnished);